ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.

ವಿಶ್ರಾಂತಿ ಗೃಹದ ಕೆಲಸವನ್ನು ಇನ್ನೂ ಪ್ರಾರಂಭಿಸಿರುವುದಿಲ್ಲ.

ವಿಷಯ:- ಬೆಳಗಾವಿ ಜಿಲ್ಲೆಯಲ್ಲಿ ಗ್ರಂಥಾಲಯ ಪ್ರಾರಂಭ

ಚುಕ್ಕೆ ಗುರುತಿಲ್ಲದ ಪ್ರಶ್ನೆ270(395)

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ವಯಸ್ಕರ ಶಿಕ್ಷಣ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾ: ಸಂಗೊಳ್ಳಿ ಹಾಗೂ ಸವದತ್ತಿ ತಾ: ಹೊಸವೂರ ಮತ್ತು ಮಲ್ಲೂರ ಗ್ರಾಮಗಳಲ್ಲಿ ಮಂಡಲ ಗ್ರಂಥಾಲಯಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ಮನವಿಗಳು ಬಂದಿದೆಯೇ?

2) ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಬೈಲಹೊಂಗಲ ತಾ: ಸಂಗೊಳ್ಳಿ ಹಾಗೂ ಸವದತ್ತಿ ತಾಲ್ಲೂಕಿನ ಮಲ್ಲೂರ ಗ್ರಾಮಗಳಲ್ಲಿ ಕಟ್ಟಡ ಸಹ ಇದ್ದು ಈ ಕಟ್ಟಡದಲ್ಲಿ ಬೇಗನೆ ಮಂಡಲ ಗ್ರಂಥಾಲಯಗಳನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

3) ಸವದತ್ತಿ ತಾಲ್ಲೂಕಿನ ಹೊಸವೂರ ಗ್ರಾಮದಲ್ಲಿ ಮಂಡಲ ಪಂಚಾಯತಿಯವರು ಪುಕ್ಕಟೆಯಾಗಿ ಕಟ್ಟಡ ಕೊಡಲು ಒಪ್ಪಿರುವುದರಿಂದ ಅಲ್ಲಿ ಮಂಡಲ ಗ್ರಂಥಾಲಯವನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಪ್ರಭಾಕರ ಎಸ್.ರಾಣೆ (ವಯಸ್ಕರ ಶಿಕ್ಷಣ ರಾಜ್ಯ ಸಚಿವರು)

ಸಂಗೊಳ್ಳಿ ಹಾಗೂ ಹೊಸವೂರ ಗ್ರಾಮಗಳ ಮನವಿಗಳು ಬಂದಿದೆ. ಮಲ್ಲೂರ ಗ್ರಾಮದ ಬಗ್ಗೆ ಸರ್ಕಾರಕ್ಕೆ ಯಾವುದೇ ಮನವಿಗಳು ಬಂದಿಲ್ಲ.

ಈ ವರ್ಷ ಸಂಗೊಳ್ಳಿ ಗ್ರಾಮದಲ್ಲಿ ಗ್ರಂಥಾಲಯ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದ ಎಲ್ಲಾ ಪ್ರದೇಶಗಳನ್ನು ಗಮನದಲ್ಲಿಟ್ಟು ಕೊಂಡು ಎಲ್ಲಾ ಮಂಡಲಗಳಿಗೂ ಸಮಾನಂತರ ಅವಕಾಶ ಕಲ್ಪಿಸಲು, ಹಾಗೂ ಆಯವ್ಯಯದ ಆಧಾರದ ಮೇಲೆ ಹಂತ ಹಂತವಾಗಿ ಗ್ರಂಥಾಲಯಗಳನ್ನು ಪ್ರಾರಂಭಿಸುವ ಯೋಜನೆ ಇದಾಗಿರುವ ಕಾರಣ ಹೊಸವೂರ ಗ್ರಾಮದಲ್ಲೂ ಈ ಕಾರ್ಯಕ್ರಮವನ್ನು ಆಯವ್ಯಯದನುಕೂಲತೆಗನುಗುಣವಾಗಿ ಅಳವಡಿಸಿಕೊಳ್ಳಲಾಗುವುದು.

ವಿಷಯ:-ಬೈಲಹೊಂಗಲ ತಾಲ್ಲೂಕಿನ ನೇಸರಗಿ ಹಾಗೂ ದೊಡವಾಡ ಸರ್ಕಾರೀ ಪದವೀಪೂರ್ವ ಕಾಲೇಜುಗಳಲ್ಲಿ ವೊಕೇಶನಲ್ ಕೋರ್ಸುಗಳು.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 271(396)

ಶ್ರೀ ಶಿವಾನಂದ ಹೆಚ್.ಕೌಜಲಗಿ(ಬೈಲಹೊಂಗಲ)

ಮಾನ್ಯ ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಹಾಗೂ ದೊಡವಾಡ ಗ್ರಾಮಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವೊಕೇಶನಲ್ ಕೋರ್ಸುಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ಮನವಿಗಳು ಬಂದಿರುವುದೆ?

ಆ) ಹಾಗಿದ್ದಲ್ಲಿ ಅಲ್ಲಿ ವೋಕೇಶನಲ್ ಕೋರ್ಸುಗಳನ್ನು ಪ್ರಾರಂಭಿಸಲು ಎಲ್ಲಾ

ಸೌಕರ್ಯಗಳನ್ನು ಹೊಂದಿದ್ದು, ವೊಕೇಶನಲ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು.

(ಇ) ಗ್ರಾಮೀಣ ಭಾಗಗಳಲ್ಲಿ ವೊಕೇಶನಲ್ ಕೋರ್ಸುಗಳನ್ನು ಪ್ರಾರಂಭಿಸಲು ಸರ್ಕಾರದವರು ಹೆಚ್ಚಿನ ಆದ್ಯತೆ ನೀಡುವರೇ

ಶ್ರೀ ಪ್ರಭಾಕರ್ ಎಸ್.ರಾಣೆ

(ವಯಸ್ಕರ ಶಿಕ್ಷಣ ಸಚಿವರು)

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಿಂದ ವೃತ್ತಿ ಶಿಕ್ಷಣ ಕೋರ್ಸು ಪ್ರಾರಂಭಿಸುವ ಬಗ್ಗೆ ಅರ್ಜಿ ಬಂದಿರುತ್ತದೆ.

ದೊಡವಾಡ ಸರ್ಕಾರಿ ಪದವಿ ಪೂರ್ವ ಕಾಲೇಜಿನಿಂದ ವೃತ್ತಿ ಶಿಕ್ಷಣ ಕೋರ್ಸುಗಳಿಗಾಗಿ ಸರ್ಕಾರಕ್ಕೆ ಮನವಿ ಬಂದಿಲ್ಲ.

ನೇಸರಗಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ 1993-94ನೇ ಸಾಲಿಗೆ ಹೊಲಿಗೆ ಮತ್ತು ಕಸೂತಿ ವೊಕೇಶನಲ್ ಕೋರ್ಸಿನ ಬಗ್ಗೆ ದಿ:16.8.93 ರಲ್ಲಿ ಮಂಜೂರಾತಿ ನೀಡಲಾಗಿದೆ.

ದೊಡವಾಡ ಸರ್ಕಾರಿ ಪದವಿ ಪೂರ್ವ ಕಾಲೇಜಿನಿಂದ ಮನವಿ ಬಂದಿಲ್ಲವಾದ ಕಾರಣ– ಉದ್ಭವಿಸುವುದಿಲ್ಲ.

-ಹೌದು-

ವಿಷಯ:- ಮುಳಗುಂದ ಗ್ರಾಮಕ್ಕೆ ಪದವಿ ಪೂರ್ವ ಕಾಲೇಜು ಮಂಜೂರು ಬಗ್ಗೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 272(571)

ಶ್ರೀ ಕೆ.ಹೆಚ್.ಕುರಡಗಿ (ಮುಂಡರಗಿ)

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಗದಗ್ ತಾಲ್ಲೂಕಿನ ಮುಳಗುಂದ ಗ್ರಾಮದಲ್ಲಿ ಸರ್ಕಾರದಿಂದ ಪದವಿ ಪೂರ್ವ ಕಾಲೇಜು ಪ್ರಾರಂಭಿಸಬೇಕೆಂದು ಕೋರಿ ಅನೇಕ ಮನವಿಗಳನ್ನು ಕೊಟ್ಟಿದ್ದರೂ ಸಹ ಇನ್ನೂ ಪ್ರಾರಂಭಿಸದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಯಾವಾಗ ಇದನ್ನು ಪ್ರಾರಂಭ ಮಾಡಲಾಗುವುದು.

ಶ್ರೀಮತಿ. ನಾಗಮ್ಮ ಸಿ.ಕೇಶವಮೂರ್ತಿ

(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಕಾಲೇಜುಗಳನ್ನು ಪ್ರಾರಂಭಿಸದೇ ಇರುವುದು ನಿಜ.

ಸದರಿ ಗ್ರಾಮದಲ್ಲಿ ಕಾಲೇಜಿನ ಅವಶ್ಯಕತೆಯ ಬಗ್ಗೆ ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.